ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ದಿನಾಂಕ:18.08.2018ರಂದು ನಡೆದ ವಿಷಯ ಸಭೆಯಲ್ಲಿ ಪಾಲಿಕೆಯ ಶಾಲಾ-ಕಾಲೇಜು ಕಟ್ಟಡಗಳ ನಿರ್ಮಾಣ, ಉನ್ನತ್ತೀಕರಣ, ನಿರ್ವಹಣೆ ಹಾಗೂ ಇತರೇ ಅಭಿವೃದ್ಧಿಗಳ ಬಗ್ಗೆ ಅನುದಾನ ಹಂಚಿಕೆ ಕುರಿತು ಸಮಿತಿಯು ಕೈಗೊಂಡ ನಿರ್ಣಯ.

ವಿಷಯ ಸಂಖ್ಯೆ:2/18-19:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಆಯ-ವ್ಯಯದ ಶಿಕ್ಷಣ ಇಲಾಖೆಯ ಲೆಕ್ಕ ಶೀರ್ಷಿಕೆ-3284ರಲ್ಲಿ ಶಾಲಾ-ಕಾಲೇಜು ಕಟ್ಟಡ ನಿರ್ಮಾಣ ಮತ್ತು ಉನ್ನತ್ತೀಕರಣಕ್ಕಾಗಿ ರೂ.200.00ಲಕ್ಷಗಳು ಮತ್ತು ಲೆಕ್ಕ ಶೀರ್ಷಿಕೆ-3285ರಲ್ಲಿ ಪಾಲಿಕೆಯ ಶಾಲಾ-ಕಾಲೇಜುಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳಿಗಾಗಿ ರೂ.300.00ಲಕ್ಷಗಳ ಮೊತ್ತವನ್ನು ಮೀಸಲಿರಿಸಲಾಗಿರುತ್ತದೆ.

ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಾಲಿಕೆಯ ಶಿಶುವಿಹಾರ, ಶಾಲಾ / ಕಾಲೇಜುಗಳ ಕಟ್ಟಡಗಳು ಸುಸ್ಥಿತಿಯಲ್ಲಿ ನಿರ್ವಹಣೆ ಇಲ್ಲದೇ ಇರುವುದು ಹಾಗೂ ಪಾಲಿಕೆಯ ಹೊಸ ವಲಯಗಳಲ್ಲಿ ಪಾಲಿಕೆಯ ಶಾಲಾ / ಕಾಲೇಜು ಕಟ್ಟಡಗಳು ಇಲ್ಲದೇ ಇರುವುದು ಸಮಿತಿಯು ತಪಾಸಣೆ ಮಾಡಿದ ಸಂದರ್ಭದಲ್ಲಿ ಸಮಿತಿಯ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಪಾಲಿಕೆಯ ಶಾಲಾ / ಕಾಲೇಜುಗಳ ನೂತನ ಕಟ್ಟಡಗಳ ನಿರ್ಮಾಣ ಮತ್ತು ಹಾಲಿ ಇರುವ ಕಟ್ಟಡಗಳ ನಿರ್ವಹಣೆ, ದುರಸ್ತಿ ಮತ್ತು ಉನ್ನತ್ತೀಕರಣ ಕಾಮಗಾರಿಗಳಿಗಾಗಿ ಪಾಲಿಕೆಯ 2018-19ನೇ ಸಾಲಿನ ಆಯ-ವ್ಯಯದಲ್ಲಿ ಮೀಸಲಿರಿಸುವಂತೆ, ಕೆಲವು ವಾರ್ಡ್‌ಗಳ ವ್ಯಾಪ್ತಿಯಲ್ಲಿ ಶಾಲಾ / ಕಾಲೇಜುಗಳ ಉನ್ನತ್ತೀಕರಣ, ದುರಸ್ತಿ ಮೂಲ ಸೌಕರ್ಯ ಒದಗಿಸಲು ಹಾಗೂ ನೂತನ ಶಾಲಾ / ಕಾಲೇಜುಗಳ ನೂತನ ಕಟ್ಟಡಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲು ಪಾಲಿಕೆಯ ಸದಸ್ಯರು ಪತ್ರ ಮುಖೇನಾ ಕೋರಿರುತ್ತಾರೆ.

ಪಾಲಿಕೆಯ ಸದಸ್ಯರುಗಳು ಅನುದಾನ ಕೋರಿರುವ ಹಾಗೂ ತಪಾಸಣೆ ಮಾಡಿದ ಸಂದರ್ಭದಲ್ಲಿ ಸಮಿತಿಯ ಗಮನಕ್ಕೆ ಬಂದ ಮೇರೆಗೆ, ಈ ಕೆಳಕಂಡಂತೆ, 2018-19ನೇ ಸಾಲಿನ ಆಯ-ವ್ಯಯದಲ್ಲಿ ಶಿಕ್ಷಣ ಇಲಾಖೆಯ ಮೇಲ್ಕಾಣಿಸಿರುವ ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಹಂಚಿಕೆ ಮಾಡಲು ಸಮಿತಿಯು ತೀರ್ಮಾನಿಸಿತು.

ಲೆಕ್ಕ ಶೀರ್ಷಿಕೆ-3284ರಲ್ಲಿ ಶಾಲಾ / ಕಾಲೇಜು ಕಟ್ಟಡ ನಿರ್ಮಾಣ ಮತ್ತು ಉನ್ನತ್ತೀಕರಣಕ್ಕಾಗಿ ಮೀಸಲಿರಿಸಿರುವ ಅನುದಾನದಲ್ಲಿ ವಾರ್ಡ್ ಸಂಖ್ಯೆ:74ಕ್ಕೆ ರೂ.125.00ಲಕ್ಷಗಳು ಮತ್ತು ವಾರ್ಡ್ ಸಂಖ್ಯೆ:123ಕ್ಕೆ 75.00ಲಕ್ಷಗಳು.

ಲೆಕ್ಕ ಶೀರ್ಷಿಕೆ-3285ರಲ್ಲಿ ಪಾಲಿಕೆಯ ಶಾಲಾ / ಕಾಲೇಜುಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಮೀಸಲಿರಿಸಿರುವ ಅನುದಾನದಲ್ಲಿ ವಾರ್ಡ್ ಸಂಖ್ಯೆ:17ಕ್ಕೆ ರೂ.40.00ಲಕ್ಷಗಳು, ವಾರ್ಡ್ ಸಂಖ್ಯೆ:76ಕ್ಕೆ ರೂ.50.00ಲಕ್ಷಗಳು, ವಾರ್ಡ್ ಸಂಖ್ಯೆ:91ಕ್ಕೆ ರೂ.50.00ಲಕ್ಷಗಳು, ವಾರ್ಡ್ ಸಂಖ್ಯೆ:92ಕ್ಕೆ ರೂ.30.00ಲಕ್ಷಗಳು, ವಾರ್ಡ್ ಸಂಖ್ಯೆ:110ಕ್ಕೆ ರೂ.50.00ಲಕ್ಷಗಳು, ವಾರ್ಡ್ ಸಂಖ್ಯೆ:137ಕ್ಕೆ ರೂ.30.00ಲಕ್ಷಗಳು, ವಾರ್ಡ್ ಸಂಖ್ಯೆ:142ಕ್ಕೆ ರೂ.30.00ಲಕ್ಷಗಳು, ವಾರ್ಡ್ ಸಂಖ್ಯೆ:154ಕ್ಕೆ ರೂ.20.00ಲಕ್ಷಗಳು.

Scanned with CamScanner

ವಾರ್ಡ್‌ವಾರು ಹಂಚಿಕೆ ಮಾಡಿರುವ ಅನುದಾನದಲ್ಲಿ ಶಾಲಾ / ಕಾಲೇಜು ಕಟ್ಟಡ ನಿರ್ಮಾಣ ಮತ್ತು ಉನ್ನತ್ತೀಕರಣ ಹಾಗೂ ಪಾಲಿಕೆಯ ಶಾಲಾ / ಕಾಲೇಜುಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳಿಗಾಗಿ ಅವಶ್ಯವಿರುವ ಶಾಲಾ / ಕಾಲೇಜು ಕಟ್ಟಡಗಳಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು, ನೂತನ ಕಟ್ಟಡ ನಿರ್ಮಾಣ ಹಾಗೂ ಅವಶ್ಯವಿರುವ ಇತರೇ ಕಾಮಗಾರಿ ಕಾರ್ಯಗಳಿಗಾಗಿ ಪಾಲಿಕೆಯ ಮುಖ್ಯ ಆರ್ಥಿಕ ಆಧಿಕಾರಿಯವರು ಚಾಪ್ ಸಂಕೇತವನ್ನು ನೀಡಲು ಹಾಗೂ ಜರೂರಾಗಿ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೆತ್ತಿಕೊಳ್ಳಲು, ಆಯುಕ್ತರು ಸೂಚಿಸುವುದೆಂದು ಸಮಿತಿಯು ತೀರ್ಮಾನಿಸಿತು.

Gangamma
(ಗಂಗಮ್ಮ)
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ.

ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರುಗಳ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
ಗಂಗಮ್ಮ	ಅಧಕ್ಷರು	Gangamma
ಜಯಪ್ರಕಾಶ್.ಎಂ.ಸಿ.	ಸದಸ್ಯರು	Jayp
ಜೆ.ಎಂ.ಸವಿತ ಮಾಯಣ್ಣಗೌಡ	ಸದಸ್ಯರು	
ಶಶಿರೇಖಾ ಜಯರಾಮ್.ಎಸ್	ಸದಸ್ಯರು	
ವಾಣಿ.ವಿ.ರಾವ್	ಸದಸ್ಯರು	Vani. V. Rao
ಕೆ.ಎನ್.ಲಕ್ಷ್ಮೀ ನಟರಾಜ್	ಸದಸ್ಯರು	Lakshmi Nataraj
ಆರ್.ವಸಂತ್‌ಕುಮಾರ್	ಸದಸ್ಯರು	R. ವಸಂತಕುಮಾರ
ಕೇಶವಮೂರ್ತಿ.ಎಸ್.	ಸದಸ್ಯರು	
ಗಾಯತ್ರಿ.ಎಂ	ಸದಸ್ಯರು	
ಆರ್ಯ ಶ್ರೀನಿವಾಸ್	ಸದಸ್ಯರು	
ಆನಂದ್‌ಕುಮಾರ್.ಎಸ್.	ಸದಸ್ಯರು	

Scanned with CamScanner